O.S.No. 207/2007 D W - 1

ದಿನಾಂಕ 26.09.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. P.S.R. ವಕೀಲರಿಂದ :

ವಾದಿಯವರು ಈ ದಾವೆಯನ್ನು ಜಮೀನು ತಮ್ಮದು ಎಂದು ಹೇಳಿ ದಾವೆ ಹಾಕಿದ್ದಾರೆ. ದಾವಾ ಸರ್ವೆ ನಂ. 81/3, 2 ಎಕರೆ , 20 ಗುಂಟೆಗೆ ದಾವೆ ಹಾಕಿದ್ದಾರೆ. ದಾಸಯ್ಯನ ಮಗ ತಿಮ್ಮಯ್ಯ ನನ್ನ ತಾತ. ದಿನಾಂಂಕ 11.09.1933 ರಲ್ಲಿ ಖರೀದಿಸಿದ ಪತ್ರವನ್ನು ಬೇರೆಯವರ ಮೂಲಕ ಓದಿಸಿ ತಿಳಿದುಕೊಂಡಿದ್ದೇನೆ. ಸದರಿ ಕ್ರಯಪತ್ರದಲ್ಲಿನ ಸರ್ವೆ ನಂಬರ್ 81/3 ಆಗಿದೆ. ಸದರಿ ಕ್ರಯಪತ್ರದ ಪ್ರಕಾರ ನಾವು ಸರ್ವೆ ನಂ. 80 ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ನನ್ನ ತಾತ ಕ್ರಯ ಪಡೆದಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ. 80 ರಲ್ಲಿ ನನ್ನ ತಾತ ಜಮೀನು ಕ್ರಯ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ. 80/1 , ಒಟ್ಟು 4 ಎಕರೆ 26 ಗುಂಟೆ ಜಮೀನು ಇದೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 80/1 ರಲ್ಲಿ ,2 ಎಕರೆ 20 ಗುಂಟೆಗೆ ಎಂ. ಆರ್. 2/94-95 ರಂತೆ ನಿಮ್ಮ ತಾತನ ಹೆಸರಿಗೆ ಖಾತೆ ಆಗಿದೆ ಎಂದರೆ ಗೊತ್ತಿಲ್ಲ. ನನ್ನ ತಂದೆ ನನ್ನ ತಾತನ ಮರಣಾನಂತರ ತೀರಿಕೊಂಡಿದ್ದಾರೆ. ಅವರು ಯಾವಾಗ ಮರಣ ಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮರಿಯಮ್ಮ ಕೋಂ ವೆಂಕಟಾಚಲಯ್ಯ ನನ್ನ ತಾಯಿ. ಸರ್ವೆ ನಂ. 80/1 ರ ರ 2 ಎಕೆರ 20 ಗುಂಟೆ ಜಮೀನು ನನ್ನ ತಾಯಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಗೊತ್ತಿಲ್ಲ. 2000-2001 ರವರೆಗೆ ಅನುಭವದ ಆಧಾರದ ಮೇಲೆ ನಿಮ್ಮ ತಾಯಿ ಹೆಸರಿಗೆ ಸದರಿ ಸರ್ವೆ ನಂಬರ್ ನಲ್ಲಿ ಖಾತೆ ಬರುತ್ತಿದೆ ಎಂದರೆ ಗೊತ್ತಿಲ್ಲ. 2013-14 ರಲ್ಲಿ ಸರ್ವೆ ನಂ. 80/1 ರಲ್ಲಿ 4 ಎಕರೆ 26 ಗುಂಟೆಯನ್ನು ಜಂಟಿಯಾಗಿ ಹೊನ್ನೇಗೌಡ ಮತ್ತು ಮರಿಯಮ್ಮ ನವರ ಹೆಸರಿಗೆ ಖಾತೆ ಮಾಡಲಾಗಿದೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 80/1 ರಲ್ಲಿ ಎಂ. ಆರ್. 2/94-95 ರಂತೆ ನಿಮ್ಮ ತಾತನ ಹೆಸರಿಗೆ ಹಾಗೂ ಎಂ. ಆರ್. 3/94-95 ರಂತೆ ನಿಮ್ಮ ತಾಯಿಯ ಹೆಸರಿಗೆ ಖಾತೆ ಆಗಿರುವುದನ್ನು

ಪ್ರಶ್ನಿಸಿದ್ದೀರಾ ಎಂದರೆ ಇಲ್ಲ  ಎಂದು ನುಡಿಯುತ್ತಾರೆ.

2. 1933 ರಲ್ಲಿ  ನಿಮ್ಮ ತಾತ  ಸರ್ವೆ ನಂ. 81/3  ರಲ್ಲಿ ಜಮೀನು ಖರೀದಿಸಿದ್ದಕ್ಕೆ  ಮತ್ತು ಸದರಿ ಸರ್ವೆ ನಂಬರ್  81/3 ಅವರ ಹೆಸರಿಗೆ ಖಾತೆ ಆದ ಬಗ್ಗೆ ದಾಖಲೆ ನೀಡಿದ್ದೀರಾ ಎಂದರೆ ಸಾಕ್ಷಿ ನೀಡಿದ್ದೇನೆ ಎಂದುನುಡಿಯುತ್ತಾರೆ. ಯಾವ ವರ್ಷದಲ್ಲಿ ನಮ್ಮ ತಾತನ ಹೆಸರಿಗೆ ಖಾತೆಯಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರಿಗೆ ಯಾವ ವರ್ಷ ಖಾತೆಯಾಯಿತು ಎಂದು ನನಗೆ ಗೊತ್ತಿಲ್ಲ. 11.09. 1933 ರ  ಕ್ರಯ ಪತ್ರದಲ್ಲಿ ಸರ್ವೆ ನಂಬರ್  80  ಎಂದು ತಪ್ಪಾಗಿ ನಮೂದಾಗಿರುವ ಬಗ್ಗೆ ನಾವು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸಿಲ್ಲ. ಆ ಬಗ್ಗೆ ವಾದಿಗಳಿಗೆ ಅಥವಾ ಸದರಿ ಸ್ವತ್ತನ್ನು ಮಾರಾಟ ಮಾಡಿದವರ ವಾರಸುದಾರರಿಗೆ  ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿ.

3. ದಿನಾಂಕ 24.08.1950 ರಲ್ಲಿ ನಂಜೇಗೌಡ ಅಲಿಯಾಸ್ ಭೋಗೇಗೌಡರಿಂದ ಸರ್ವೆ ನಂ. 81/3 ರಲ್ಲಿ 27 ಗುಂಟೆ ಖರೀದಿಸಿದ್ದಾರೆ ಎಂದರೆ ಸರಿ.  ಸದರಿ ಸ್ವತ್ತನ್ನು ಖರೀದಿಸಿದ್ದಕ್ಕೆ ಸದರಿ 27 ಗುಂಟೆಗೆ ಪ್ರತ್ಯೇಕವಾಗಿ ಖಾತೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಒಟ್ಟು 3 ಎಕರೆ 7 ಗುಂಟೆಗೆ ಒಟ್ಟಿಗೆ ಖಾತೆ ಬರುತ್ತದೆ ಎಂದುನುಡಿಯುತ್ತಾರೆ. ದಿನಾಂಕ 11.09.1933 ಹಾಗೂ 24.08.1950 ರ ಕ್ರಯಪತ್ರಗಳ ಆಧಾರದ ಮೇಲೆ ಒಟ್ಟು ಖಾತೆ ಮಾಡಿದ್ದಾರೆ. ಸರ್ವೆ ನಂ. 81/3 ರಲ್ಲಿ ನನ್ನ ತಾತ ಖರೀದಿಸಿರುವ 27 ಗುಂಟೆಗೆ ಮಾತ್ರ ನಾವು ಹಕ್ಕುದಾರರು ಎಂದರೆ ಸರಿಯಲ್ಲ. ಬಾಕಿ  ಸರ್ವೆ ನಂ. 81/3 ರಲ್ಲಿನ ಎರಡು ಎಕರೆ 20 ಗುಂಟೆಗೆ ನಾವುಹಕ್ಕುದಾರರಲ್ಲ ಹಾಗೂ ನಾವು ಅದರ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಈ  ದಾವೆಯನ್ನು ಹಾಕಿದ ನಂತರ ಸದರಿ 2 ಎಕರೆ 20 ಗುಂಟೆ ಜಮೀನಿಗೆ  ಎಂ. ಆರ್, 11/2010-11 ರ ದಾಖಲೆಗಳನ್ನು ಸೃಷ್ಟಿಸಿ ಕೊಂಡಿದ್ದೇವೆ ಎಂದರೆ ಸರಿಯಲ್ಲ.  ಸರ್ವೆ ನಂ. 81/3 ರಲ್ಲಿ 27 ಗುಂಟೆಯಲ್ಲಿ  ಮಾತ್ರ ನನ್ನ ತಾತ, ಅವರ ನಂತರ ನಾನು ಮತ್ತು ನನ್ನ ತಾಯಿ ಸದರಿ ಸ್ವತ್ತಿನ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ. ದಾವ ಸ್ವತ್ತಿಗೆ ನಾವು ಅಪರಿಚಿತರುಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಮತ್ತು ನನ್ನ ತಾಯಿಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪಶ್ಚಿಮಕ್ಕೆ ನಮ್ಮ ತಾತ ಖರೀದಿಸಿದ ಸ್ವತ್ತು ಇದೆ ಎಂದರೆ ಸರಿಯಲ್ಲ. ಆದರೂ ಸಹ ದಾವಾ ಸ್ವತ್ತಿನ ಮೇಲೆ ಸುಳ್ಳು ಹಕ್ಕನ್ನು ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವೆ ಚಾಲ್ತಿಯಲ್ಲಿರುವಾಗ ಗುಂಡಾಗಳನ್ನು ಕರೆದುಕೊಂಡು ಹೋಗಿ ವಾದಿಯವರ ಹುಲ್ಲು ಮೆದೆಗೆ ಬೆಂಕಿ ಹಚ್ಚಿ ಒತ್ತಾಯ ಪೂರ್ವಕವಾಗಿ ಅವರಿಂದ ಅಕ್ರಮವಾಗಿ ದಾವಾ ಸ್ವತ್ತಿನ ಸ್ವಾಧೀನ ಪಡೆದಿದ್ದೇವೆ ಎಂದರೆ ಸರಿಯಲ್ಲ. 11.09.1933 ರ ಕ್ರಯಪತ್ರದಲ್ಲಿ 81/3 ಎಂದು ಬರಬೇಕಾಗಿತ್ತು, ಆದರೆ ಸರ್ವೆ ನಂ. 80 ಎಂದು ಬರೆದಿದೆ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ನನಗೆ ಸರ್ವೆ ನಂ. 81/3 ರ ಬಗ್ಗ ಮಾತ್ರ ಗೊತ್ತು. ಸರ್ವ ನಂ. 80 ರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 80 ರ ಸ್ವತ್ತನ್ನು 1933 ರಲ್ಲಿ ನನ್ನ ತಾತ ಖರೀದಿಸಿರುವ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿಲ್ಲ. ಸದರಿ 1933 ರ ಕ್ರಯ ಪತ್ರದಲ್ಲಿ ಸರ್ವೆ ನಂ.81/3 ರ ಬದಲಿಗೆ ಸರ್ವೆ ನಂ. 80 ಎಂದು ನಮೂದಾಗಿರುವ ಬಗ್ಗೆ ನನಗೆ ವಾದಿಯವರು ದಾವೆ ಹಾಕಿದ ನಂತರ ತಿಳಿಯಿತು. ನನಗೆ ಆ ವಿಷಯ ತಿಳಿದ ನಂತರ ಆ ಬಗ್ಗೆ ನಾನು ಯಾವುದೇ ಪ್ರಾಧಿಕಾರದ ಮುಂದೆ ಆ ವಿಷಯ ಪ್ರಶ್ನಿಸಿಲ್ಲ. ಎಂ. ಆರ್. 8/91-92 ರ ದಾಖಲೆಯನ್ನು ಪ್ರಶ್ನಿಸಿ ವಾದಿಯವರು ರಾಮನಗರ ಉಪವಿಭಾಗಾಧಿಕಾರಿಗಳ ಮುಂದೆ RALKP 161/2000-2001 ರಂತೆ ಪ್ರಶ್ನಿಸಿದ್ದಾರೆ ಎಂದರೆ ಸರಿ. ಸರ್ವೆ ನಂ. 81/3 ರಲ್ಲಿ 27 ಗುಂಟೆ ಗೆ ಮಾತ್ರ ನಾವು ಹಕ್ಕುದಾರರು ಎಂದು ಆದೇಶ ಮಾಡಿ ಹಾಗೂ ಬಾಕಿ ಎರಡು ಎಕರೆ 20 ಗುಂಟೆಗೆ ವಾದಿಯವರ ಹೆಸರಿಗೆ ಉಪವಿಭಾಗಾಧಿಕಾರಿಯವರು ಆದೇಶ ಮಾಡಿದ್ದಾರೆ ಎಂದರೆ ಸರಿ. ಅದರಂತೆ ಎಂ. ಆರ್. 52/2006-07 ರಂತೆ ವಾದಿಯವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ವಾದಿಯ ಹೆಸರಿಗೆ ಆದ ಖಾತೆಯನ್ನು ಪ್ರಶ್ನಿಸಿ, ಡಿಸಿ ನ್ಯಾಯಾಲಯಲ್ಲಿ ನೀವು ಅಪೀಲು ಸಲ್ಲಿಸಿದ್ದು, ಅಪೀಲು ನಿಮ್ಮ ಪರವಾಗಿ ಆಗಿದ್ದು , ಸದರಿ ಆದೇಶವನ್ನು ವಾದಿಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಹಾಕಿದ್ದರು ಎಂದರೆ ಗೊತ್ತಿಲ್ಲ. ಉಚ್ಚ ನ್ಯಾಯಾಲಯದಲ್ಲಿ ಸದರಿ ದಾವೆ ಸಿವಿಲ್ ಪ್ರಕರಣವಾದ ಕಾರಣ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಈ ದಾವೆ ಸಲ್ಲಿಸುವಂತೆ ನಿರ್ದೇಶಿಸಿದರು ಎಂದರೆ ಗೊತ್ತಿಲ್ಲ.

ದಾವಾ ಸ್ವತ್ತಿನಲ್ಲಿ ವಾದಿಯವರು ನಿರಂತರವಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯವರ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಅವರ ತಾತ ಮುತ್ತಾತನ ಕಾಲದಿಂದಲೂ ಅವರು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರೂ, ನಾನು ದಾಖಲೆಗಳನ್ನು ಸೃಷ್ಟಿಸಿಕೊಂಡು ಅವರನ್ನು ದಾವಾ ಸ್ವತ್ತಿನಿಂದ ಹೊರ ಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರ ದಾಖಲೆಯನ್ನು ತಿದ್ದಿ ಬರೆಯಲಾಗಿದೆ ಎಂದರೆ ಸಾಕ್ಷಿ ರೆವಿನ್ಯೂ ಅಧಿಕಾರಿಗಳು ಮಾಡಿರುವುದು ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ನಿಮ್ಮ ತಾತನ ಹೆಸರಿಗೆ ಖಾತೆ ಕ್ರಯದ ಆಧಾರದ ಮೇಲೆ ಬಂದ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ತಾತನ ಹೆಸರು ಇದೆ ಎಂದು ನುಡಿಯುತ್ತಾರೆ. ನಿಪಿ-5 ರಿಂದ 17 ರ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-20, 21 ರ ಕಂದಾಯ ರಶೀದಿಗಳಲ್ಲೂ ಸಹ ಸರ್ವೆನಂ. 80/1, 81/3, 81/6, ಎಂದು ನಮೂದು ಇದೆ ಎಂದರೆ ಸರಿ. ನಿಪಿ-20, 21 ನಿಮ್ಮ ತಾತ ಸರ್ವೆ ನಂ. 80/1 ರಲ್ಲಿ 2 ಎಕರೆ 20 ಗುಂಟೆ , 81/3 ರಲ್ಲಿ 27 ಗುಂಟೆ ಖರೀದಿಸಿರುವ ಜಮೀನಿಗೆ ಪಾವತಿಸಿರುವ ಕಂದಾಯ ಎಂದರೆ ಸಾಕ್ಷಿ ಅನುಭವದ ಆಧಾರದ ಮೇಲೆ ಪಾವತಿಸಿದ್ದೇವೆ ಎಂದು ನುಡಿಯುತ್ತಾರೆ. ನಿಪಿ-18, ರ ದಾಖಲೆಯನ್ನು ಡಿಸಿಯವರ ಜೊತೆ ಶಾಮೀಲಾಗಿ ಹಾಗೂ ನಿಪಿ-19 ರ ದಾಖಲೆಯನ್ನು ಸಹ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಹಿತಾಸಕ್ತಿಗಳು ಇಲ್ಲದೇ ಇದ್ದರೂ ಸಹ ವಾದಿಗಳ ಗಮನಕ್ಕೆ ಬರದಂತೆ ನಿಪಿ-16 ಅನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. 81/3 ರಲ್ಲಿ 27 ಗುಂಟೆ ಯನ್ನು ಮಾತ್ರ ಖರೀದಿಸಿರುವ ಕಾರಣ ನಮಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಅಕ್ರಮವಾಗಿ

ಪಡೆಯಲು ವಾದಿಗಳನ್ನು ಓಡಿಸಿ ದಾವಾ ಸ್ವತ್ತಿನ ಸ್ವಾಧೀನ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಮುಖ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಗಿಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ